

ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರುವ ಬಹುತೇಕ ಪೋಷಕರದ್ದು ಒಂದೇ ಪ್ರಶ್ನೆ. 'ಈ ವರ್ಷ ಎನ್ಇಪಿ' ಜಾರಿಗೆ ಬರುತ್ತಾ?

ಒಂದಷ್ಟು ಉಪ ಪ್ರಶ್ನೆಗಳೂ ಇವೆ: ಎನ್ಇಪಿಯಿಂದ ಮಕ್ಕಳಿಗೆ ಅನುಕೂಲ ಆಗುತ್ತಾ? ಅಥವಾ ಏನಾದರೂ ತೊಂದರೆ ಇದೆಯಾ? ಶಾಲೆಯ ಫೀಸ್ ಜಾಸ್ತಿ ಆಗುತ್ತಾ? ಜಾಸ್ತಿ ಸಬ್ಜೆಕ್ಟ್ ಓದಬೇಕಂತೆ ಹೌದಾ? ಹೈಸ್ಕೂಲ್‌ನಲ್ಲಿ ಒಂಬತ್ತನೇ ಕ್ಲಾಸಿಗೂ ಪಬ್ಲಿಕ್ ಪರೀಕ್ಷೆ ಇರುತ್ತಂತೆ ಹೌದಾ? ಈಗ ಆರು ಸಬ್ಜೆಕ್ಟ್ ಓದ್ತಾ ಇದಾರೆ, ಇನ್ನು ಮುಂದೆ ಹದಿನಾರು ಸಬ್ಜೆಕ್ಟ್ ಓದಬೇಕಂತೆ, ಇದು ಸಾಧ್ಯಾನಾ? ಇನ್ಮುಂದೆ ಪಿಯುಸಿಯಲ್ಲಿ ಸೈನ್ಸು, ಕಾಮರ್ಸ್, ಆರ್ಟ್ಸ್ ಅಂತ ಬೇರೆ ಬೇರೆ ಇರಲ್ಲ ಅಂತಾರೆ, ನಮ್ಮ ಮಕ್ಕಳು ಯಾವ ಕೋರ್ಸ್ ಕಲೀಬಹುದು, ಎಲ್ಲ ಮಿಕ್ಸ್ ಆಗಿಬಿಟ್ಟರೆ ಕನ್ಫ್ಯೂಸ್ ಆಗೋದಿಲ್ವಾ? ಈಗಿರೋದನ್ನೇ ಓದೋಕೆ ಮಕ್ಕಳಿಗೆ ಆಗ್ತಾ ಇಲ್ಲ, ಇನ್ನು ಎಲ್ಲಾ ಮಿಕ್ಸ್ ಮಾಡಿಕೊಂಡು ಓದು ಅಂದ್ರೆ ಅವರ ಭವಿಷ್ಯದ ಗತಿ ಏನು?

'ಎನ್ಇಪಿ' ಕುರಿತ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ದೊರೆಯದೆ ಆತಂಕಪಡುತ್ತಿರುವ ಪೋಷಕರ ಬಳಗ ದೊಡ್ಡದಿದೆ. ಇಂಥ ಪೋಷಕರ ನಡುವೆ, 'ಇನ್ಮುಂದೆ ಹೈಸ್ಕೂಲಿನಲ್ಲೇ ವ್ಯವಸಾಯ ಹೇಳಿಕೊಡ್ತಾರಂತೆ. ಹಂಗಾಂದ್ರೆ ನನಗೆ ತುಂಬಾ ಖುಷಿ. ನನ್ನ ಮಗ ಎಂಜಿನಿಯರ್ ಆಗ್ತೀನಿ ಅಂತ ಕುಣೀತಿದ್ದ. ಈಗ ರೈತ ಆಗ್ತೀನಿ ಅಂತಿದ್ದಾನೆ ಅದೇ ನನಗೆ ಸಮಾಧಾನ' ಎಂದು ಹೆಸರಘಟ್ಟ ಬಳಿಯ ರೈತನೊಬ್ಬ ಸಂತಸದಿಂದ ಹೇಳುತ್ತಾನೆ. 'ಹೊಸ ಶಿಕ್ಷಣ ನೀತಿ'ಯ ಕುರಿತು ರೈತರ ಕಿವಿಗೂ ಮಾಹಿತಿ ಬಿದ್ದಿದೆ. ಅಷ್ಟರಮಟ್ಟಿಗೆ ಅನುಷ್ಠಾನಕ್ಕೆ ಮೊದಲೇ 'ಎನ್ಇಪಿ' ಸುದ್ದಿ ಮಾಡಿದೆ.

ಪದವಿ ಪೂರ್ವ ಕಾಲೇಜಿನ ಮೇಷ್ಟ್ರುಗಳದ್ದು ಮತ್ತೊಂದು ಬಗೆಯ ಅಳಲು. 'ಮಕ್ಕಳು ಇಲ್ಲಿಯವರೆಗೆ ನಮ್ಮನ್ನೆಲ್ಲ ಲೆಕ್ಚರರ್ಸ್ ಅಂತಿದ್ರು. ಇನ್ಮುಂದೆ ಟೀಚರ್ ಅಂತಾ ಕರೀತಾರೆ. ಇದೊಂಥರಾ ಡಿಮೋಶನ್ ಇದ್ದಂಗೆ. ಯಾಕೊ ಇದು ಸರಿ ಕಾಣ್ತಾ ಇಲ್ಲ' ಎನ್ನುವುದು ಅವರ ಅಳಲು.

ಇನ್ನೊಂದೆಡೆ ಹರಟೆಕಟ್ಟೆ, ವಾಟ್ಸ್ಆ್ಯಪ್, ಫೇಸ್‌ಬುಕ್ ವಿವಿಯ ಪಂಡಿತರುಗಳು, 'ಈ ಸರ್ಕಾರ ಮುಂದಿನ ಎಲೆಕ್ಷನ್‌ನಲ್ಲಿ ಗೆಲ್ಲದಿದ್ರೆ ಯಾವ ಎನ್ಇಪಿನೂ ಇರಲ್ಲ, ಮಣ್ಣಂಗಟ್ಟಿಯೂ ಇರಲ್ಲ. ರಾಜ್ಯದಲ್ಲೂ ಅಷ್ಟೇ — ಈಗಿನ ಸರ್ಕಾರ ಬಿದ್ದುಹೋದ್ರೆ ಎನ್ಇಪಿಗೆ ಎಳ್ಳುನೀರು ಬಿಟ್ಟಂತೆಯೆ' ಎಂದು ತೀರ್ಪು ನೀಡುತ್ತಿದ್ದಾರೆ.

'ಎನ್ಇಪಿ' ಕುರಿತ ಚರ್ಚೆಗಳನ್ನು ಗಮನಿಸಿದರೆ ಒಂದು ವಿಷಯ ಸ್ಪಷ್ಟವಾಗುತ್ತದೆ. ಅದು 'ಹೊಸ ಶಿಕ್ಷಣ ನೀತಿ'ಯ ಬಗ್ಗೆ ಅರಿವಿಗಿಂತಲೂ ಅಜ್ಞಾನವೇ ಹೆಚ್ಚಿನ ಪ್ರಮಾಣದಲ್ಲಿರುವುದು. 'ಎನ್ಇಪಿ' ಕುರಿತ ಕರಡನ್ನು ವಿಸ್ತೃತವಾಗಿ ಓದಿ ಅರ್ಥ ಮಾಡಿಕೊಂಡಾಗಷ್ಟೇ ಅದರ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಲು ಅವಕಾಶವಾಗುತ್ತದೆ. ಇಷ್ಟಕ್ಕೂ 'ಹೊಸ ಶಿಕ್ಷಣ ನೀತಿ'ಯಲ್ಲಿ ಏನೇನಿದೆ?

## ಕರಡನ್ನು ಹರಡಿ ನೋಡೋಣ

ಮೊದಲ 5 ವರ್ಷಗಳ 'ತಳಹದಿ ಶಿಕ್ಷಣ ಹಂತ' (Foundational), ನಂತರದ 3 ವರ್ಷಗಳ 'ಪೂರ್ವ ಸಿದ್ಧತಾ ಶಿಕ್ಷಣ ಹಂತ' (Preparatory), ನಂತರದ 3 ವರ್ಷಗಳ 'ಮಾಧ್ಯಮಿಕ ಶಿಕ್ಷಣ ಹಂತ' (Middle) ಹಾಗೂ ಕೊನೆಯ 4 ವರ್ಷಗಳ ಸೆಕೆಂಡರಿ ಶಿಕ್ಷಣ ಹಂತ (High School — College) ಹೀಗೆ (5+3+3+4) ನಾಲ್ಕು ಹಂತಗಳಲ್ಲಿ ನಡೆಯುವ ಶೈಕ್ಷಣಿಕ ಚಟುವಟಿಕೆಗಳು, ಇಡೀ ದೇಶದ ವಿವಿಧ ಬಗೆಯ ಶೈಕ್ಷಣಿಕ ಮಾದರಿಗಳ ಅಗತ್ಯಗಳನ್ನು ಪೂರೈಸುವಂತಿರಬೇಕು ಎನ್ನುವ ಭದ್ರ ತಳಹದಿಯ ಮೇಲೆ ರೂಪುಗೊಂಡಿರುವ 2020ರ 'ರಾಷ್ಟ್ರೀಯ ಶಿಕ್ಷಣ ನೀತಿ'ಯ ಅನುಷ್ಠಾನಕ್ಕೆ ಬೇಕಾದ ಕಾರ್ಯಸೂಚಿಯನ್ನು ವಿಶದವಾಗಿ ತಿಳಿಸುವ ಪೂರ್ವ ಕರಡು 'ಎನ್‌ಸಿಎಫ್' ಬಗ್ಗೆ ತರಹೇವಾರಿ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. 'ಎನ್ಇಪಿ'ಗೆ ಯಾವುದೇ ಮುನ್ನುಡಿ ಇಲ್ಲ. ಕಲಿಕೆಯ ಹೆಸರಿನಲ್ಲಿ, ಅದರಲ್ಲೂ ಇತಿಹಾಸ ಕಲಿಕೆಯ ವಿಷಯದಲ್ಲಿ ರಾಷ್ಟ್ರೀಯತೆಯ ಸೋಗು ಹೊದ್ದ ಅನೇಕ ಬೇಡದ, ಸಮಾಜ ಒಡೆಯುವ ಸಿದ್ಧಾಂತ, ಸಂದರ್ಭ, ಘಟನೆಗಳ ಪ್ರಸ್ತಾಪ ಇದರಲ್ಲಿದೆ ಎನ್ನುವ ಅಪಸ್ವರಗಳು ದೇಶದ ವಿವಿಧ ಭಾಗಗಳಿಂದ ವ್ಯಕ್ತವಾಗಿವೆ. ಈ ಅಪಸ್ವರಗಳ ನಡುವೆಯೇ, ಹೊಸ ಶಿಕ್ಷಣ ನೀತಿ ಆಧಾರಿತ 'ನ್ಯಾಷನಲ್ ಕರಿಕ್ಯುಲಮ್ ಫ್ರೇಮ್‌ವರ್ಕ್'(NCF)ನ ಪೂರ್ವ ಕರಡನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ಈ ಕರಡಿನ ಬಗ್ಗೆ ಸಾರ್ವಜನಿಕರು, ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಾಮಾಜಿಕ ತಜ್ಞರ ಅಭಿಪ್ರಾಯ, ವಿಮರ್ಶೆ, ಸಲಹೆ, ಟೀಕೆ ಟಿಪ್ಪಣಿಗಳನ್ನು ಜೂನ್ 23ರ ಒಳಗೆ ರಾಜ್ಯ ಸರ್ಕಾರಗಳು ಸಮಿತಿಯ ಗಮನಕ್ಕೆ ತರಬೇಕು ಎಂದು ಕೇಂದ್ರ ಸರ್ಕಾರ ಹೇಳಿದೆ. ಆದರೆ, ದೇಶದ ಶಿಕ್ಷಕರೆಲ್ಲ ವಾರ್ಷಿಕ ಪರೀಕ್ಷೆ ಮತ್ತು ಮೌಲ್ಯಮಾಪನ ಕೆಲಸದಲ್ಲಿ ತೊಡಗಿಕೊಂಡಿರುವುದರಿಂದ ಕರಡನ್ನು ಓದಲು, ಪ್ರತಿಕ್ರಿಯಿಸಲು ಬೇಕಾದಷ್ಟು ಸಮಯ ಸಿಗುತ್ತಿಲ್ಲ. ಇದರಿಂದಾಗಿ ದೇಶದ ಶಿಕ್ಷಣ ವಲಯವನ್ನು ಚಿಂತನೆಗೆ ಹಚ್ಚುವಲ್ಲಿ ಸರ್ಕಾರದ ಪ್ರಯತ್ನ ಹೆಚ್ಚು ಯಶಸ್ಸು ಕಾಣುವುದಿಲ್ಲ. ಆಸಕ್ತಿ ಇರುವ ಕೆಲವರಷ್ಟೇ ಕರಡನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ಸಲಹೆ ನೀಡುವ ಸಾಧ್ಯತೆಯಿದೆ.